# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 49 ಸಮನ್ವಯ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:16.05.2009.

M. D.
21 MAY 2009
KPTCL

ಮಾನವ ಹಕ್ಕು

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು-1.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ: 82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-9.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಚೇರಿ, ಕೆ.ಆರ್. ವೃತ್ತ, ಬೆಂಗಳೂರು-1.
4. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ನವನಗರ, ಹುಬ್ಬಳ್ಳಿ-580 025.
5. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ಸ್ಟೇಷನ್ ರಸ್ತೆ, ಪರಿವಾರ್ ಹೋಟೆಲ್ ಎದುರುಗಡೆ, ಗುಲ್ಬರ್ಗಾ-585 102.
6. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ಅಂಚೆ ಪೆಟ್ಟಿಗೆ ಸಂಖ್ಯೆ : 200, ಪ್ಯಾರಾಡಿಂ ಪ್ಲಾಜ್ಞಾ, ಎ. ಬಿ. ಶೆಟ್ಟಿ ವೃತ್ತ, ಮಂಗಳೂರು-575 001.
7. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕಾರ್ಪೊರೇಟ್ ಕಛೇರಿ, ನಂ: 927, ಎಲ್.ಜೆ. ಅವಿನ್ಯು ಕಮರ್ಷಿಯಲ್ ಕಾಂಪ್ಲೆಕ್ಸ್, ನ್ಯೂ ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570 009.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ, ಬೆಂಗಳೂರು-1.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ: 19, ಕ್ವೀನ್ಸ್ ರಸ್ತೆ, ಬೆಂಗಳೂರು-52.
10. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು-9.
11. ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಶುಗರ್ ಕಟ್ಟಡ, ನೆಲ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-2.

Dir. (Admn)

M.D. KPTCL
Pl. send to all CE's / SE's / EE's

DGM (P)

ಮಾನ್ಯರೆ,

ವಿಷಯ: ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿಯನ್ನು ಸಲ್ಲಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆ ಸಂಖ್ಯೆ : ಲಾ 60 ಹೆಚ್‌ಆರ್‌ಸಿ 2008 ದಿನಾಂಕ :9.4.2009 ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮಾಹಿತಿ ಮತ್ತು ಸೂಕ್ತ ಕ್ರಮಕ್ಕೆ ತಮಗೆ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಸ್.ಜೆ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
☏ 22034674.

1067

**ಕರ್ನಾಟಕ ಸರ್ಕಾರ**

ಸಂಖ್ಯೆ: ಲಾ 60 ಹೆಚ್‌ಆರ್‌ಸಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 9ನೇ ಏಪ್ರಿಲ್ 2009.

**ಸುತ್ತೋಲೆ**

**ವಿಷಯ:** ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿಯನ್ನು ಸಲ್ಲಿಸುವ ಬಗ್ಗೆ.

********

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ದೂರುಗಳು ಸ್ವೀಕೃತವಾದಾಗ, ಆ ಬಗ್ಗೆ ಕಾಲಮಿತಿಯೊಳಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಆಯೋಗವು ಸರ್ಕಾರಕ್ಕೆ ಸೂಚನಾ ಪತ್ರವನ್ನು ನೀಡುತ್ತಲಿರುತ್ತದೆ. ಇಂತಹ ಪ್ರಕರಣಗಳಲ್ಲಿ ಆಯೋಗದ ನಿರ್ದೇಶನದಂತೆ ಸೂಕ್ತ ತನಿಖೆ ನಡೆಸಿ, ವರದಿ/ವರದಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಸೂಚಿಸಲಾಗುತ್ತಿದೆ.

ಆದರೆ ಹಲವಾರು ಪ್ರಕರಣಗಳಲ್ಲಿ ಸಂಬಂಧಪಟ್ಟ ಆಡಳಿತ ಇಲಾಖೆಯು ದೂರುಗಳಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯವು ಬೇರೊಂದು ಇಲಾಖೆಗೆ ಸಂಬಂಧಪಟ್ಟಿದೆ ಎಂಬ ನಿಲುವನ್ನು ತಳೆದು, ಸ್ವೀಕೃತವಾದ ನೋಟೀಸು ಹಾಗೂ ದೂರಿನ ಪ್ರತಿಯನ್ನು ವಿಷಯಕ್ಕೆ ಸಂಬಂಧಿಸಿದ ಇಲಾಖೆಗೆ ವರ್ಗಾಯಿಸಿದರೂ ಸಹ ಈ ಬಗ್ಗೆ ಕಾನೂನು ಇಲಾಖೆಗೆ ಯಾವುದೇ ಮಾಹಿತಿಯನ್ನು ನೀಡುತ್ತಿಲ್ಲವೆಂಬ ಅಂಶವನ್ನು ಗಮನಿಸಲಾಗಿದೆ. ಈ ರೀತಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ದೂರುಗಳನ್ನು ವರ್ಗಾಯಿಸಿದಂತಹ ಸಂದರ್ಭಗಳಲ್ಲಿ, ಆಯೋಗಕ್ಕೆ ತಪಾಸಣಾ/ವಿಚಾರಣಾ ವರದಿಗಳನ್ನು ಸಲ್ಲಿಸದೇ ಇರುವ ಪ್ರಕರಣಗಳು ಹೆಚ್ಚಾಗತೊಡಗಿದ್ದು, ಆಯೋಗದಿಂದ ಸ್ವೀಕೃತವಾದ ನೋಟೀಸುಗಳಿಗೆ ಉತ್ತರ/ವರದಿಗಳನ್ನು ಸಲ್ಲಿಸಲಾಗಿದೆಯೇ ಎಂಬ ಬಗ್ಗೆ ಹಿಂಬಾಲಿಕಾ ಕ್ರಮ ಇಲ್ಲದಂತಾಗಿದೆ. ಇದರ ಪರಿಣಾಮವಾಗಿ, ಆಯೋಗದ ನಿರ್ದೇಶನವನ್ನು ಪಾಲಿಸಲಿಲ್ಲವೆಂಬ ಕಾರಣಕ್ಕಾಗಿ, ಆಯೋಗವು ನಿರ್ದೇಶನ ನೀಡಿದ ವಿಚಾರದ ಬಗ್ಗೆ [illegible] ಮುಖ್ಯ ಕಾರ್ಯದರ್ಶಿಗಳು ವೈಯಕ್ತಿಕವಾಗಿ ಆಯೋಗದ ಮುಂದೆ ಹಾಜರಾಗಲು ಸಮನ್ಸ್‌ಗಳನ್ನು ಜಾರಿ ಮಾಡುತ್ತಿದೆ.

ಯಾವುದೇ ಲೋಪದೋಷಗಳಿಗೆ ಅವಕಾಶವನ್ನೀಯದೆ ನಿಗದಿತ ಸಮಯದೊಳಗೆ ತನಿಖೆ ನಡೆಸಿ ತನಿಖಾ ವರದಿಯನ್ನು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಸಲ್ಲಿಸುವುದು ಆಡಳಿತಾತ್ಮಕ ಇಲಾಖೆಯ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸಲ್ಲಿಸಲ್ಪಟ್ಟ ದೂರುಗಳು ತಪ್ಪಾಗಿ ಸಂಬಂಧಪಡದ ಇಲಾಖೆಗೆ ಕಳುಹಿಸಿಕೊಟ್ಟಂತಹ ಸಂದರ್ಭಗಳಲ್ಲಿ, ಆ ಇಲಾಖೆಯು ಈ ದೂರನ್ನು ಪ್ರಕರಣಕ್ಕೆ ಸಂಬಂಧಿಸಿದ ಇಲಾಖೆಗೆ ವರ್ಗಾಯಿಸಿ ದೂರಿಗೆ ಸಂಬಂಧಿಸಿದ ನೋಟೀಸು ಹಾಗೂ ಅದರ ಅಡಕಗಳನ್ನು ಅಗತ್ಯ ಕ್ರಮಕೈಗೊಳ್ಳುವ ಸಲುವಾಗಿ ಕಳುಹಿಸಿಕೊಟ್ಟು, ಈ ಬಗ್ಗೆ ಕಾನೂನು ಇಲಾಖೆಗೆ ಹಾಗೂ ಇತರ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿ ನೀಡತಕ್ಕದ್ದು.

PSE EST/T/E/ 3442
Dated 4/5/09

K. JAIRAJ
Principal Secretary to Government
Energy Department

ಮುಂದುವರಿದಿದೆ.....2

ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಸಲ್ಪಟ್ಟ ದೂರುಗಳು ಕೆಲವೊಮ್ಮೆ ಒಂದಕ್ಕಿಂತ ಹೆಚ್ಚಿನ ಇಲಾಖೆಗಳಿಗೆ ಸಂಬಂಧಿಸಿರುತ್ತದೆ. ಸಾಮಾನ್ಯವಾಗಿ ಅಂತಹ ಪ್ರಕರಣಗಳಲ್ಲಿ ಮೂಲತ: ದೂರಿನ ವಿಷಯವು ಯಾವ ಇಲಾಖೆಗೆ ಅತೀ ಹೆಚ್ಚು ಸಂಬಂಧಿಸಿರುತ್ತದೋ, ಆ ಇಲಾಖೆಗೆ ದೂರಿನ ನೋಟೀಸನ್ನು ಅದರ ಅಡಕದೊಂದಿಗೆ ಕಳುಹಿಸಲಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ, ಸಂಬಂಧಪಟ್ಟ ಆಡಳಿತ ಇಲಾಖೆಯೇ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸಲ್ಲಿಸಲಾದ ದೂರುಗಳ ಬಗ್ಗೆ ಅಗತ್ಯ ತನಿಖೆ ಕೈಗೊಂಡು, ಇದರ ಜೊತೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇತರ ಇಲಾಖೆಯ ವಿಷಯವು ಒಳಗೊಂಡಿದ್ದಲ್ಲಿ, ಇತರ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಮಾಹಿತಿ/ವರದಿಯನ್ನು ತರಿಸಿಕೊಂಡು ಕ್ರೋಢೀಕರಿಸಿದ ವರದಿಯನ್ನು ನಿಗದಿತ ಸಮಯದೊಳಗೆ ನೇರವಾಗಿ ಆಯೋಗಕ್ಕೆ ಸಲ್ಲಿಸುವುದು. ಒಂದು ವೇಳೆ ಇನ್ನಿತರ ಇಲಾಖೆಗಳಿಂದ ವರದಿ/ಮಾಹಿತಿಯನ್ನು ಪಡೆಯಬೇಕಾದಲ್ಲಿ, ಹಾಗೂ ನಿಗಧಿತ ಸಮಯದೊಳಗೆ ಸಲ್ಲಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ, ಹೆಚ್ಚಿನ ಕಾಲಾವಕಾಶ ನೀಡುವಂತೆ ಕೋರಿ ಆಡಳಿತ ಇಲಾಖೆಯೇ ಮಾನವ ಹಕ್ಕುಗಳ ಆಯೋಗಕ್ಕೆ ಲಿಖಿತ ಮೂಲಕ ಮನವಿಯನ್ನು ಸಲ್ಲಿಸುವುದು.

ಆಯೋಗಗಳಿಗೆ ನಿಗದಿತ ಸಮಯದೊಳಗೆ ವರದಿಯನ್ನು ಸಲ್ಲಿಸದೇ ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಯಾವುದೇ ಲೋಪಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗುವುದು. ಈ ಮಾರ್ಗಸೂಚಿಗಳನ್ನು ಎಲ್ಲಾ ಸಂಬಂಧಪಟ್ಟ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಪ್ರಕರಣಗಳಲ್ಲಿಯೂ ಸಹ ಮೇಲೆ ನಮೂದಿಸಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(ಸುಧಾಕರ್ ರಾವ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
4. ಪೋಲೀಸ್ ಮಹಾ ನಿರ್ದೇಶಕರು, ನೃಪತುಂಗ ರಸ್ತೆ, ಬೆಂಗಳೂರು.
5. ಇಲಾಖಾ ಮುಖ್ಯಸ್ಥರು.
6. ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಸಚಿವಾಲಯ.
7. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು/ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
9. ಎಲ್ಲಾ ಪೋಲೀಸು ವರಿಷ್ಠಾಧಿಕಾರಿಗಳು
10. ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು.

**GOVERNMENT OF KARNATAKA**

No. LAW 60 HRC 2008.

Karnataka Government Secretariat,
Vidhana Soudha,
Bangalore, Dated: 9th April 2009.

**CIRCULAR**

Sub: Submission of reports to State Human Rights Commission with regard to the complaints of violation of human rights.

- - - - -

Whenever complaints of violation of human rights are received by the Karnataka State Human Rights Commission, notices are issued by the Commission to investigate such matters and submit a report within a specified time. In such cases, the concerned Administrative Departments are instructed to conduct investigation/enquiry and submit report/s to the State Human Rights Commission within a specified time.

It is observed that sometimes when such instructions are issued to the Administrative Department concerned, the notice along with its enclosures are transmitted to some other department on the ground that the subject matter of the complaint pertains to other department, without the Law Department being informed. As a result, report of investigation/enquiry are not being submitted to the State Human rights Commission within the specified time as indicated in the Notice, nor are they being monitored. Consequently, for non-compliance of the directions of the Commission, the Commission has been issuing summons to the Chief Secretary for personal appearance along with the report of investigation.

It is the primary responsibility of the concerned administrative department to ensure that the report of investigation/enquiry is submitted to the State Human Rights Commission within the specified time without giving room for such lapses. In case a matter has been referred to a department incorrectly, that department may transfer it to the correct department but the Law Department and the other departments should be kept informed.

Contd.....

Some of the complaints of violation of human rights submitted to the Karnataka State Human Rights Commission may pertain to more than one department. In such cases, copy of the notice and its enclosures are sent to the department which is majorly concerned with the subject matter of the complaint. It may be noted that in such cases, where more than one department is involved with the complaint, the administrative department mainly concerned with the subject should obtain the information from other departments involved and send the reply/report to Karnataka Human Rights Commission. If necessary, this department may request the Commission in writing for grant of additional time for compliance.

Any lapses in ensuring timely submission of reports to State Human Rights Commission, causing unnecessary embarrassment to Government, would be viewed seriously. All departments concerned are hereby directed to follow these instructions scrupulously in future.

These instructions may be scrupulously followed while dealing with the notices of the National Human Rights Commission also.

(Sudhakar Rao)
Chief Secretary to Government

To:

1. All Additional Chief Secretaries to Government.
2. All Principal Secretaries/Secretaries to Government.
3. Principal Secretary to Hon'ble Chief Minister.
4. Inspector General of Police, Nrupathunga Road, Bangalore.
5. All Heads of Departments.
6. All Additional/Joint/Deputy/Under Secretaries, Karnataka Government Secretariat.
7. All Regional Commissioners/Deputy Commissioners.
8. All Chief Executive Officer of Zilla Panchayats.
9. All Superintendents of Police.
10. Personal Secretary to Chief Secretary/Additional Chief Secretary.